**ಓಎಸ್ಃ 753/2006          ಡಿ.ಡಬ್ಲ್ಯೂಃ 4 ಕರೀಗೌಡ**

**ಸಾಕ್ಷಿಯನ್ನು ದಿಃ 25.07.2023 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ 1 ನೇ ಪ್ರತಿವಾದಿ ಪರ ವಕೀಲರಿಂದಃ**

ದಿಃ 31.01.1998 ರ ಕ್ರಯಪತ್ರಕ್ಕೆ ವಾದಿಯರ ಅಕ್ಕತಂಗಿಯರನ್ನು ಪಕ್ಷಗಾರರನ್ನಾಗಿ ಮಾಡಲು ತೊಂದರೆ ಇತ್ತಾ ಎಂದರೆ ಆ ವಿಷಯ ನನಗೆ ಗೊತ್ತಿರಲಿಲ್ಲ ಎಂದು ಉತ್ತರಿಸಿರುತ್ತಾರೆ. ದಾವ ಆಸ್ತಿಗಳು ಒಟ್ಟ ಎಷ್ಟು ಎಕರೆ ಇದೆ ಎಂದು ನನಗೆ ಗೊತ್ತಿಲ್ಲ. ದಾವ ಆಸ್ತಿಗಳಲ್ಲಿ ಒಟ್ಟು 12 ಚಿಲ್ಲರೆ ಎಕರೆ ಇದೆ. ಸದರಿ 12 ಎಕರೆ ಜಮೀನಿಗೆ ಸಂಬಂಧಪಟ್ಟಂತೆ ವಾದಿ 1 ನೇ ಪ್ರತಿವಾದಿ ಹಾಗೂ ನಮ್ಮಗಳ ನಡುವೆ ಯಾವುದೇ ವಿಭಾಗ ಆಗಿರುವುದಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ತಿಮ್ಮಮ್ಮ ರವರಿಗೆ ಎಷ್ಟು ಆಸ್ತಿ ಬಂದಿದೆ ಎಂದು ನನಗೆ ನಿಖರವಾಗಿ ಗೊತ್ತಿಲ್ಲ ಎಂದರೆ ಸಾಕ್ಷಿಯು ತಿಮ್ಮಮ್ಮ ರವರು 1963-64 ರಲ್ಲಿ ತಮಗೆ ಬಂದ ಆಸ್ತಿಗಳನ್ನು ಚಿಕ್ಕ ತಾಯಮ್ಮ ರವರಿಗೆ ಮಾರಾಟ ಮಾಡಿರುತ್ತಾರೆ ಎಂದು ಉತ್ತರಿಸಿರುತ್ತಾರೆ. ಆ ಕಾಲಕ್ಕೆ ವಿಭಾಗ ಆಗಿರಲಿಲ್ಲ

ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ 1 ನೇ ಪ್ರತಿವಾದಿಯವರ ಅಕ್ಕ ಎಂದರೆ ಸರಿ. ಪ್ರತಿವಾದಿ 1 ರಿಂದ 3 ರವರ ನಡುವೆ ಯಾವುದೇ ವಿಭಾಗ ಆಗಿರುವುದಿಲ್ಲ ಎಂದರೆ ಸರಿಯಲ್ಲ. ವಿಭಾಗ ಆದ ಬಗ್ಗೆ ದಾಖಲೆ ನೋಡಿರುವುದಿಲ್ಲ. ಮುಂದುವರೆದು ಸಾಕ್ಷಿಯು ಆ ಸಮಯದಲ್ಲಿ ನಾನು ಸಣ್ಣವನಿದ್ದೆ ಎಂದು ಉತ್ತರಿಸಿರುತ್ತಾರೆ. ವಾದಿ ನೀಡಿದ ನೋಟೀಸಿಗೆ ನಾವು ಉತ್ತರ ನೀಡಿರುವುದಿಲ್ಲ ಎಂದರೆ ಆ ಬಗ್ಗೆ ಗೊತ್ತಿಲ್ಲ. ದಾವ ಹಾಕುವ ಕಾಲಕ್ಕೆ ದಾವ ಸ್ವತ್ತುಗಳು ಜಂಟಿ ಸ್ವಾಧೀನದಲ್ಲಿತ್ತು ಎಂದರೆ ಸರಿ. ಮುಂದುವರೆದು ಸಾಕ್ಷಿಯು ಅವರ ಸ್ವಾದೀನದಲ್ಲಿ ಅವರವರು ಇದ್ದರು ಎಂದು ಉತ್ತರಿಸಿರುತ್ತಾರೆ. ಸರ್ವೇ ನಂ. 24/1 ರಲ್ಲಿ ತಿಮ್ಮಮ್ಮ ನ 30 ಗುಂಟೆ ಚಿಕ್ಕತಾಯಮ್ಮ ರವರ 30 ಗಂಟೆ ಸೇರಿಸಿ ಚಿಕ್ಕತಾಯಮ್ಮರವರು ಮಾರಾಟ ಮಾಡಿರುತ್ತಾರೆ.

ನಮ್ಮ ಕುಟುಂಬಕ್ಕೆ ಮೂರು ಎಕರೆ ಜಮೀನು ಬಂದಿರುತ್ತದೆ. ಸದರಿ ಮೂರು ಎಕರೆ ಜಮೀನು ವಿಭಾಗದ ಮೂಲಕ ಬಂದಿರುವುದಿಲ್ಲ ಎಂದರೆ ಆ ಬಗ್ಗೆ ಗೊತ್ತಿಲ್ಲ. ಸದರಿ ಮೂರು ಎಕರೆ ಜಮೀನು ಮಾರಾಟ ಮಾಡಿರುವುದಿಲ್ಲ ಹಾಗೆಯೇ ಇದೆ ಎಂದು ಉತ್ತರಿಸಿರುತ್ತಾರೆ. ನಿಡಿ. 35 ಕ್ಕೆ ತಿಮ್ಮಮ್ಮ ರವರು ಸಹಿ ಮಾಡಿರುವುದಿಲ್ಲ ಎಂದರೆ ಸರಿ. ನಿಡಿ. 35 ಅನ್ನು ಈ ದಾವೆಗೆ ಸೃಷ್ಟಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಅಕ್ರಮ ಲಾಭ ಪಡೆಯಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು
ಮೈಸೂರು.